Construction of Primary School Buildings.

*Q.—127. Sri S. V. RAME GOWDA (Malur).—

Will the Government be pleased to state :—

(*a*) whether they would consider the question of constructing Primary School buildings in all the villages in the State at Government cost where there are no such buildings ;

(*b*) whether they would take over responsibility of repairs and maintenance of Primary School buildings in view of the fact that they have not sanctioned any funds for this purpose to the Taluk Boards according to the existing orders and as the economic conditions of the Taluk Boards is not satisfactory ?

A.—Sri S. R. KANTHI (Minister for Education).—

(*a*) No.

(*b*) No. But financial aid is being given to Taluk Boards for repair and maintenance of Primary School buildings.

ಶ್ರೀ ಎಸ್. ವಿ. ರಾಮೇಗೌಡ.—ಸರ್ಕಾರದವರು ಪ್ರತಿಯೊಂದು ತಾಲ್ಲೂಕಿಗೂ ಕೊಡತಕ್ಕ ಹಣ ಆಲ್ಲೆರತಕ್ಕ ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ಸಾರ್ವಾಗುತ್ತದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿಕೊಡುತ್ತಾ ಇದ್ದೀರಾ ?

†ಶ್ರೀ ಎಸ್. ಆರ್. ಕಂಠಿ.—ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಸ್ಕೂರ್ ಬಿಲ್ಡಿಂಗ್‌ಗಳು ಬಹಳ ಇರುವುದರಿಂದ ಆ ರೀತಿ ಪರಿಶೀಲನೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಆದರೆ ಎಲ್ಲಾ ಜಿಲ್ಲೆಗಳಿಗೂ ಸ್ಕೂರ್ ಬಿಲ್ಡಿಂಗ್‌ಗಳು ಬೇಕು ಅನ್ನುವಂತಹ ಅವಶ್ಯಕತೆ ಇವೆ ಎನ್ನುವುದು ಸರ್ಕಾರದವರಿಗೆ ಗೊತ್ತಿದೆ.

ಶ್ರೀ ಎಸ್. ವಿ. ರಾಮೇಗೌಡ.—ಪ್ರತಿಯೊಂದು ತಾಲ್ಲೂಕಿಗೂ ಸರ್ಕಾರದವರು ಕೊಡುತ್ತಾ ಇದ್ದಾರಲ್ಲಾ ಆ ಹಣ ಎಷ್ಟೆಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—1964-65ಕ್ಕೆ 4 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 1965-66ಕ್ಕೆ 7 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವು. ಹಿಂದಿನ ವರ್ಷಗಳಲ್ಲಿ 2 ಲಕ್ಷ—3 ಲಕ್ಷ ಹೀಗೆ ಕೊಟ್ಟಿದ್ದೇವೆ.

ಶ್ರೀ ಎಸ್. ವಿ. ರಾಮೇಗೌಡ.—ಪ್ರತಿಯೊಂದು ತಾಲ್ಲೂಕಿಗೂ ಎಷ್ಟು ಹಣ ಕೊಡುತ್ತಾ ಇದ್ದೀರಿ ಎಂದು ನಾನು ಕೇಳುತ್ತಾ ಇದ್ದೇನೆ.

ಶ್ರೀ ಎಸ್. ಆರ್. ಕಂಠಿ.—ಹಾಗೆ ನಾವು ಕೊಡುವುದಿಲ್ಲ. ಜಿಲ್ಲೆಗೆ ಎಂದು ಅಲಾಟ್ ಮಾಡುತ್ತಾ ಇದ್ದೇವೆ, ಅದನ್ನು ಡೆಪ್ಯೂಟಿ ಕಮಿಷನರು ಅಲಾಟ್ ಮಾಡುತ್ತಾರೆ.

ಶ್ರೀ ಜಿ. ರಾಮೇಗೌಡ.—ಹಣ ಕೊಡುವಾಗ ಯಾವ ಆಧಾರದ ಮೇಲೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹಣ ಕೊಡುವುದೇ ಬಹಳ ಕಡಿಮೆ. ಇದ್ದ ಹಣ ಕೊಡುವುದು ಒಂದೇ ಬೇಸಿಸ್ ಹೊರತು ಬೇರೆ ಬೇಸಿಸ್ ಯಾವುದೂ ಇಲ್ಲ.

ಶ್ರೀ ಜಿ. ಸಿ. ಭಾಗೀರತಮ್ಮ.—ಪಿ.ಡಬ್ಲ್ಯು.ಡಿ. ವಶದಲ್ಲಿ ಇದ್ದರೆ ಎಷ್ಟು ಹಣ ಕೊಡುತ್ತಾ ಇದ್ದಿರೋ ಅಷ್ಟು ಹಣವನ್ನು ಈಗ ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತಾ ಇದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ತಾಲ್ಲೂಕು ಬೋರ್ಡಿಗೆ ಈಗ ನಾವು ಸುಮ್ಮನೆ ಒಟ್ಟಿನಲ್ಲಿ ಬೆರೆಸಿದ ಹಾಗೆ ಕೊಡುತ್ತಾ ಇದ್ದೇವೆ.

ಶ್ರೀ ಬಿ. ಚನ್ನಬೈರೇ ಗೌಡ.—ಟೋಕನ್ ಗ್ರಾಂಟ್ ಎಂದು ಹೇಳಿ ಕೊಡುತ್ತಾ ಇದ್ದೀರಿ, ಅದಕ್ಕೆ ಬದಲಾಗಿ ಸರ್ವೆ ಮಾಡಿ ಉತ್ತಮವಾದ ಕಟ್ಟಡ ಕಟ್ಟುವುದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಕೊಡುವುದಕ್ಕೆ ಸಾಧ್ಯವೇ ಆಗಲ್ಲವುದು.

ಶ್ರೀ ಬಿ. ಬೈರಪ್ಪಾಜಿ.—ಹಿಂದೆ ಇದ್ದ ರೀತ್ಯಾ ಪಿ. ಡಬ್ಲ್ಯೂ. ಡಿ. ಅವರು ವರ್ಷಾಬಾದು ಕಾಂಗಾರಿಯನ್ನು ಮಾಡುತ್ತಾ ಇದ್ದರು. ಆಗ ಕಟ್ಟಡ ಚೆನ್ನಾಗಿ ಇರುತ್ತಾ ಇತ್ತು; ಈಗ ತಾವು ಒಂದು ಆರ್ಡರ್ ಮಾಡಿದ ಮೇಲೆ ಈ ಕಟ್ಟಡಗಳನ್ನು ತಾಲ್ಲೂಕು ಬೋರ್ಡಿನವರೇ ರಿಪೇರಿ ಮಾಡ ಬೇಕಾಗಿರುವುದರಿಂದ ಅವರು ರಿಪೇರಿ ಮಾಡದೇ ಅನೇಕ ಕಟ್ಟಡಗಳು ಕುಸಿದು ಬಿದ್ದುಹೋಗುವ ಸ್ಥಿತಿಯಲ್ಲರುವುದು ತಮ್ಮ ಗಮನಕ್ಕೆ ಬಂದಿದೆಯೇ? ಈಗ ಇರತಕ್ಕ ಕಟ್ಟಡಗಳನ್ನು—ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅವನು ಉಳಿಸಿಕೊಳ್ಳಬೇಕಾದರೆ ಪಿ.ಡಬ್ಲ್ಯೂ.ಡಿ. ಅವರಿಗೆ ಅವನ್ನು ನೇರವಾಗಿ ವಹಿಸಿ, ಅವರೇ ನೇರವಾಗಿ ಆ ಕೆಲಸ ನಿರ್ವಹಿಸುವಂತಹ ಒಂದು ಆದೇಶವನ್ನು ಇನ್ನು ಮುಂದಾದರೂ ಸರ್ಕಾರದವರು ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಪಂಚಾಯ್ತಿ ರಾಜ್ಯ ಕಾನೂನು ಪ್ರಕಾರ ಅದೆಲ್ಲಾ ತಾಲ್ಲೂಕು ಬೋರ್ಡಿಗೇ ಸಂಬಂಧಿಸಿದ ವಿಷಯವಾಗುತ್ತದೆ, ಅವರೇ ಕಟ್ಟಡ ಕಟ್ಟಿಸಬೇಕು, ಅವರೇ ರಿಪೇರಿ ಮಾಡಬೇಕೆಂಬ ವಿಚಾರ ಅದರಲ್ಲಿ ಇದೆ. ಇದರಲ್ಲಿ ಒಂದು ಬಹಳ ಮುಖ್ಯವಾದ ವಿಚಾರ ಎಂದರೆ ಅದು ಸನ್ಮಾನ್ಯ ಸದಸ್ಯರಿಗೂ ಗೊತ್ತಿದೆ, ಜನರಿಗೂ ಗೊತ್ತಿದೆ. ತಾಲ್ಲೂಕು ಬೋರ್ಡಿನವರು ವರ್ಷಕ್ಕೆ 8-10 ಶಾಲೆಗಳನ್ನು ಕಟ್ಟಿಸುತ್ತಾರೆ. ತಮ್ಮ ಹಣದಲ್ಲಿ, ಪಂಚಾಯ್ತಿಯ ಹಣದಲ್ಲಿ ಹಾಗೂ ಜನರಿಂದ ದುಡ್ಡು ತೆಗೆದುಕೊಂಡು ಕಟ್ಟಿಸುತ್ತಾ ಇದ್ದಾರೆ, ರಿಪೇರಿ ಮಾಡಿಸುತ್ತಾ ಇದ್ದಾರೆ.

ಶ್ರೀ ಜಿ. ರಾಮೇ ಗೌಡ—ಸರ್ಕಾರದವರು ಪ್ರೈಮರಿ ಶಾಲೆಗಳನ್ನು ತಾಲ್ಲೂಕು ಬೋರ್ಡಿ ನವರೇ ವಹಿಸಿಕೊಡುವಾಗ ಸಂಪೂರ್ಣವಾಗಿ ರಿಪೇರಿ ಮಾಡಿಸಿಕೊಡುತ್ತೇವೆಂದು ಎಂದು ಹೇಳಿದ್ದು ನಿಜವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ರಿಪೇರಿ ಮಾಡುವಂತಹ ಕೆಲಸ ತಾಲ್ಲೂಕು ಬೋರ್ಡಿನವರದ್ದು, ಅವರು ಮಾಡುತ್ತಾ ಇದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಈಗಿನ ತುರ್ತು ಪರಿಸ್ಥಿತಿಯಲ್ಲಿ ಈ ಕಟ್ಟಡಗಳ ಕಾಂಗಾರಿ ಯನ್ನು ನಿಲ್ಲಿಸಬೇಕೆಂದು ಒಂದು ಉದ್ದೇಶ ಇಟ್ಟುಕೊಂಡಿದ್ದೀರಿ. ವಿದ್ಯಾ ಇರಾಖೆಯಲ್ಲರತಕ್ಕ ಎಲ್ಲಾ ಕಟ್ಟಡಗಳಿಗೂ ಇದು ಅನ್ವಯಿಸುತ್ತದೆಯೆ ?

ಶ್ರೀ ಎಸ್. ಆರ್. ಕಂಠಿ.—ತುರ್ತು ಪರಿಸ್ಥಿತಿಯಲ್ಲಿ ಯಾವ ಶಾಲಾ ಕಟ್ಟಡಗಳನ್ನ ಕಟ್ಟಿಸ ಬಾರದು ಎನ್ನುವಂತಹ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಅದು ನಿಜ; ಆದರೆ ಶಾಲಾ ಕಟ್ಟಡ ಆಗುವುದಿಲ್ಲ ಎಂದು ಹೇಳುವುದನ್ನು ನಾನು ನಂಬುವುದಿಲ್ಲ—ಏಕೆಂದರೆ ತಾಲ್ಲೂಕುಬೋರ್ಡಿನವರು, ಊರಿನ ಜನರು ಸೇರಿ ಕಟ್ಟಿಸುತ್ತಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳೂ, ಉಳಿದ ಮಂತ್ರಿಗಳೂ ಅವುಗಳನ್ನು ಪ್ರಾರಂಭ ಮಾಡುವುದಕ್ಕೆ ಹೋಗುತ್ತಾ ಇದ್ದೇವೆ. ಉತ್ತಮವಾದ ಕಟ್ಟಡಗಳನ್ನು ಅವರು ಕಟ್ಟಿಸುತ್ತಾ ಇದ್ದಾರೆ.

ಶ್ರೀ ಬಿ. ಬೈರಪ್ಪಾಜಿ -ಸನ್ಮಾನ್ಯ ವಿದ್ಯಾ ಸಚಿವರು ನಾಲ್ಕು ಸಾವಿರ ಕಟ್ಟಡಗಳನ್ನು ಕಟ್ಟಿದ್ದಾರೆ ಎಂದು ಹೇಳುತ್ತಾ ಇದ್ದರು, ಅದು ನಿಜ, ಒಪ್ಪಿಕೊಳ್ಳೋಣ. ಕಟ್ಟಿದಂತಹ ಕಟ್ಟಡಗಳನ್ನು ಉಳಿಸಿ ಕೊಳ್ಳಬೇಕಾದ ಕರ್ತವ್ಯ ಸರ್ಕಾರದ್ದು ತಾನೇ? ಪಂಚಾಯ್ತಿಯವರು ತಾಲ್ಲೂಕು ಬೋರ್ಡಿನವರ ಮೇಲೆ ಹಾಕುತ್ತಾರೆ, ತಾಲ್ಲೂಕು ಬೋರ್ಡಿನವರು ಪಂಚಾಯ್ತಿಯವರ ಮೇಲೆ ಹಾಕುತ್ತಾರೆ. ಈ ರೀತಿ ಆಗಿರುವುದನ್ನು ತಾವು ಸ್ವಲ್ಪ ಸಾವಧಾನವಾಗಿ ಪರಿಶೀಲನೆ ಮಾಡಿದರೆ ತಮಗೇ ಗೊತ್ತಾಗುತ್ತದೆ, ಯಾರೂ ಕೂಡ ಜವಾಬ್ದಾರಿ ಹೊತ್ತುಕೊಂಡು ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ ಇದನ್ನು ಹಿಂದೆ ಇದ್ದಂತೆ ಪಿ. ಡಬ್ಲ್ಯೂ. ಡಿ. ಅವರೇ ವಹಿಸಿಕೊಳ್ಳುವಂತೆ ಮಾಡಬೇಕಾದ್ದು ಸೂಕ್ತ ಎಂದು ಹೇಳುತ್ತೇನೆ. ತಮ್ಮ ಅಭಿಪ್ರಾಯವೇನು ?

ಶ್ರೀ ಎಸ್. ಆರ್. ಕಂಠಿ.—ರಿಪೇರಿ ಮಾಡುವಂತಹ ಕೆಲಸ ಸರ್ಕಾರದವರು ಹೊತ್ತುಕೊಂಡರೆ ಸರ್ಕಾರದವರು ದುಡ್ಡು ಖರ್ಚು ಮಾಡಬೇಕಾಗುತ್ತದೆ. ಅದು ಅಸಾಧ್ಯವಾದ ಮಾತು, ಕೆಲವು ಕಡೆಗಳಲ್ಲಿ ಸರ್ಕಾರದವರು ಸ್ವಲ್ಪ ಮಾಡುತ್ತಾರೆ. ಆದರೆ ಸಾರ್ವತ್ರಿಕವಾಗಿ ಹಾಗೆ ಮಾಡುವುದ ಕ್ಕಾಗುವುದಿಲ್ಲ. ತಾಲ್ಲೂಕು ಬೋರ್ಡಿನವರೇ ಆ ಕೆಲಸವನ್ನು ಮಾಡಬೇಕು. ಮಾನ್ಯ ಸದಸ್ಯರಿಗೆ ಗೊತ್ತಿದೆ, ತಾಲ್ಲೂಕು ಬೋರ್ಡಿನವರು ಅವರ ಬಡ್ಜೆಟ್‌ನಲ್ಲಿ ಹಣ ಒದಗಿಸಿರುತ್ತಾರೆ. ಆದ್ದರಿಂದ ಸ್ವಲ್ಪ ತಾಳ್ಮೆಯಿಂದ ಇದ್ದರೆ ತಾಲ್ಲೂಕು ಬೋರ್ಡಿನವರು, ಪಂಚಾಯ್ತಿಯವರು ಮತ್ತು ಊರಿನವರು ಸೇರಿ ಈ ಕೆಲಸ ಮಾಡಿಸುತ್ತಾರೆ. ಯಾರೂ ಕೂಡ ಕಟ್ಟಡ ಬಿದ್ದು ಹೋದರೆ ಸುಮ್ಮನೆ ಇರುವುದಿಲ್ಲ. ಸರ್ಕಾರದವರನ್ನು ಶಪಿಸಿ ಅದರೂ ಅದನ್ನು ದುರಸ್ತಿ ಮಾಡಿಸಿಯೇ ಮಾಡಿಸುತ್ತಾರೆ.

ಶ್ರೀ ಸಿದ್ದಯ್ಯ ಕಾಶಿಮಠ.—ಡಿಸ್ಟ್ರಿಕ್ಟ್ ಬೋರ್ಡಿನವರು ನಡೆಸತಕ್ಕ ಶಾಲೆಗಳ ರಿಪೇರಿ ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡಿಸಬೇಕೆಂದು ಹೇಳಿದರು. ಈಗ ತಾಲ್ಲೂಕು ಬೋರ್ಡುಗಳವರು ಆ ಕೆಲಸ ಮಾಡಬೇಕಾಗಿರುವುದರಿಂದ ಅವನ್ನೂ ಕೂಡ ಇವರೇ ಮಾಡಿಸಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದೂ ಕೂಡ ಪಂಚಾಯ್ತಿ ರಾಜ್ಯ ಆಕ್ಟ್‌ನಲ್ಲಿ ರಾಗೂ ಆಗಿದೆ. ಅವರವರಲ್ಲಿ ಹಣ ಇದ್ದಷ್ಟು ಶಕ್ಯ ಇದ್ದಷ್ಟು ಮಾಡುತ್ತಾರೆ.

Tour of Ministers and Deputy Ministers.

*Q.—134. Sri MAHANTASWAMY (Shahapur).—

Will the Government be pleased to state :—

(*a*) the nubmer of times each Minister and Deputy Minister visited their Constituency and District up-to-date after their assumption of the office and purpose of their visit ;

(*b*) total amount drawn by way of T.A. and D.A. of each Minister and Deputy Minister in the above cases ?

A.—Sri S. NIJALINGAPPA (Chief Minister).—

(*a*) and (*b*) *Vide* Statement placed on the Table of the House. Copy placed in the Mysore Legislature Library.

† ಶ್ರೀ ಎಸ್. ನಿಜಲಿಂಗಪ್ಪ.—ಉತ್ತರ ಅಚ್ಚಾಗಿದೆ. ಮಿನಿಸ್ಟರು ಯಾರ್ಯಾರು ಎನ್ನುವ ಬಗ್ಗೆ ಸ್ವಲ್ಪ ವ್ಯತ್ಯಾಸವಾಗಿದೆ, ಪೋರ್ಟ್‌ಫೊಲಿಯೋ ಬದಲಾವಣೆ ಯಾಗಿದೆ, ಅದನ್ನು ಗಮನದಲ್ಲಿಟ್ಟು ಕೊಂಡು ಪ್ರಶ್ನೆ ಹಾಕಬೇಕೆಂದು ಹೇಳಲು ಆಪೇಕ್ಷೆ ಪಡುತ್ತೇನೆ. ಮತ್ತು ಪರಿಶಿಷ್ಟದಲ್ಲಿ ಮಿನಿಸ್ಟರ್ ಎಂದು ಹಾಕಿರುವುದರಲ್ಲಿ ಸ್ವಲ್ಪ ತಪ್ಪಾಗಿದೆ. ಚೀಫ್ ಮಿನಿಸ್ಟರು ಬಾಗಲಕೋಟೆ, ಬಿಜಾಪುರ, ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳಿಗೆ ಹೋದದ್ದು 12 ಸಲ ಎಂದು ತಿಳಿಸಿದ್ದಾರೆ. ಅದನ್ನೂ ಸ್ವಲ್ಪ ಸೇರಿಸಿಕೊಂಡು ಸರಿಮಾಡಿಕೊಳ್ಳಬೇಕು.

ಶ್ರೀ ಮಹಾಂತಸ್ವಾಮಿ.—ತುರ್ತು ಪರಿಸ್ಥಿತಿ ಇರುವಾಗ ಮಂತ್ರಿಗಳು ಮತ್ತು ಉಪಮಂತ್ರಿಗಳು ರಾಜ್ಯದಲ್ಲಿ ಹೆಚ್ಚು ಪ್ರವಾಸ ಮಾಡಬಾರದು ಮತ್ತು ಹೆಚ್ಚು ಹಣ ವ್ಯಯ ಮಾಡಬಾರದು ಎಂಬ ಆದೇಶ ಕೇಂದ್ರದಿಂದ ಇದೆಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೇನೂ ಕರಾರುಪಾಕ್ಯಾಗಿ ಹೇಳುವುದಕ್ಯಾಗುವುದಿಲ್ಲ. ಹೆಚ್ಚು ಪ್ರವಾಸ ಮಾಡಬೇಕಾದ ಅವಶ್ಯಕತೆ ಬಂದೀತೋ ಏನೋ ಎಂದು ನನಗೆ ಅನಿಸುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಮಂತ್ರಿಗಳು ಪ್ರವಾಸ ಮಾಡುವ ಬಗ್ಗೆ ಇದೇ ರೀತಿ ಹಿಂದೆ ಒಂದು ಪ್ರಶ್ನೆ ಬಂದಾಗ ನಾನು ಈ ಮಂತ್ರಿಗಳು ಬಂದಾಗ ಮೀಟಿಂಗ್‌ನಲ್ಲಿ ಬರೀ ಭಾಷಣಗಳನ್ನು ಮಾಡುವುದಕ್ಕೆ ಬದಲಾಗಿ ಸ್ಥಳೀಯ ಅಧಿಕಾರಿಗಳು ಮತ್ತು ರೈತರನ್ನು ಸೇರಿಸಿ ಇವರ ಕುಂದು ಕೊರತೆಗಳನ್ನು ಸ್ಥಳದಲ್ಲಿಯೇ ಬಗೆಹರಿಸಬೇಕೆಂದಾಗ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕಾರ್ಯರೂಪಕ್ಕೆ ತರುತ್ತೇನೆ ಎಂದು ಹೇಳಿದ್ದರು. ಎಷ್ಟು ಭಾಗ ಅದನ್ನು ಕಾರ್ಯರೂಪಕ್ಕೆ ತಂದಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸಾಧಾರಣವಾಗಿ ಕಾರ್ಯರೂಪಕ್ಕೆ ಬರುತ್ತಾ ಇದೆ.

ಶ್ರೀ ಎಸ್. ಎಮ್. ಕೃಷ್ಣ.—ತಿಂಗಳಿಗೆ ಕೇವಲ 10 ದಿವಸವೇ ಮಂತ್ರಿಗಳು ಪ್ರವಾಸ ಮಾಡಬೇಕು ಎಂದು ಒಂದು self-imposed restriction ತುರ್ತು ಪರಿಸ್ಥಿತಿ ಉದ್ಭವವಾದ ಮೇಲೆ ಹಾಕಿಕೊಳ್ಳಲಾಯಿತು. ಅದನ್ನು ಎಷ್ಟರಮಟ್ಟಿಗೆ ಕಾರ್ಯಾಚರಣೆಗೆ ತರಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧಾರಣವಾಗಿ 10 ದಿವಸಕ್ಕಿಂತ ಹೆಚ್ಚಾಗಿ ಟೂರ್ ಹೋಗುವುದಿಲ್ಲ. ದೆಹಲಿಗೆ ಹೋಗಬೇಕಾದರೆ ಜಾಸ್ತಿಯಾಗುತ್ತದೆ. ರಾಜ್ಯದಲ್ಲಿ ಪ್ರವಾಸ ಮಾಡುವುದು 10 ದಿವಸ ಮಾತ್ರ.

ಶ್ರೀ ಬಿ. ಚನ್ನಬೈರೇಗೌಡ.—ಕೆಲವು ಮಾನ್ಯ ಮಂತ್ರಿಗಳು ತಮ್ಮ ಸ್ವಂತ ಕ್ಷೇತ್ರಕ್ಕೆ ಹೋಗಲಿಕ್ಕೂ ಟಿ. ಎ., ಡಿ. ಎ. ತೆಗೆದುಕೊಂಡಿದ್ದಾರೆ. ಅದು ಸರಿಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸ್ವಂತ ಕ್ಷೇತ್ರವಾಗಲೀ ಅಥವಾ ಯಾವ ಕ್ಷೇತ್ರವಾದರೂ ಸರ್ಕಾರದ ಕೆಲಸಕ್ಕೆ ಹೋಗುತ್ತಾರೆ, ತಮ್ಮ ಕೆಲಸಕ್ಕೆ ಹೋಗುವುದಿಲ್ಲ, ಆದುದರಿಂದ ವಿನಾಯಿತಿ ಮಾಡುವುದ ಕ್ಯಾಗುವುದಿಲ್ಲ.